ಕೊಟ್ಟು ಆ ಪೋಲಿಸಿನವರಿಗೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಆ ಸರ್ವೆ ಕಾರ್ಯ ಮುಗಿಯಬೇಕು, ಅಬಾಧಿತವಾಗಿ ಈ ಕೆಲಸ ನಡೆಯಬೇಕು, ಎಲ್ಲಾ ರಕ್ಷಣೆಯನ್ನು ಇವರಿಗೆ ಕೊಡಬೇಕೇ ಹೊರತು ಒತ್ತುವರಿ ಮಾಡುವವರಿಗೆ ರಕ್ಷಣೆ ಕೊಡಬಾರದು ಎಂದು ತಾವು ಆದೇಶ ಕೊಡಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ತಮಗೆಲ್ಲಾ ಗೊತ್ತಿದ್ದಂತೆ ಒಮ್ಮೊಮ್ಮೆ ಸಂದರ್ಭಗಳು ಬರುತ್ತವೆ. ಉದಾಹರಣೆಗೆ ಹೇಳುವುದಾದರೆ ಮೊನ್ನೆ ಮಹಾವೀರ ಜಯಂತಿ ಮತ್ತು ಬಕ್ರೀದ್ ಹಬ್ಬಗಳು ಬಂದವು. ಕೆಲವು ಸೂಕ್ಷ್ಮವಾದ ಪ್ರದೇಶಗಳಲ್ಲಿ ಶಾಂತಿಗೆ ಭಂಗ ಆಗಬಹುದು ಎನ್ನುವಂತಹ ಸಂಶಯಗಳು ಮತ್ತು ಸೂಕ್ಷ್ಮತೆ ಗೊತ್ತಿತ್ತು. ಆ ಕಾರಣಕ್ಕಾಗಿ ಕೆಲವು ಸಿಬ್ಬಂದಿ ವರ್ಗದವರನ್ನು ಅಲ್ಲಿಗೆ ಕಳುಹಿಸಿಕೊಟ್ಟಿರುತ್ತೇವೆ.

ಹಾಗೆಯೇ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಪರೀಕ್ಷೆಯ ಸಭಾಂಗಣಗಳಲ್ಲಿ ಅನೇಕ ವಿದ್ಯಾರ್ಥಿಗಳು ಕಾಪಿ ಮಾಡುತ್ತಾ ಇದ್ದಾರೆ, ಅದಕ್ಕೂ ತಾವುಗಳು ತಡೆ ಮಾಡುವ ಕ್ರಮ ತೆಗೆದುಕೊಳ್ಳಬೇಕೆಂದು ಬರುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ಪ್ರತಿಯೊಂದು ವಿಷಯದಲ್ಲಿಯೂ ಕೂಡ ತಾವು ನಿರ್ವಹಿಸಬೇಕಾದ ಕರ್ತವ್ಯಗಳಲ್ಲಿ ಪೋಲೀಸ್ ರಕ್ಷಣೆ ಬೇಕೆಂದು ಇರುವುದರಿಂದ ಅವರ ಮೇಲೆ ಹೆಚ್ಚಿನ ಒತ್ತಡವು ಇದೆ. ಆದ್ದರಿಂದ ಅಲ್ಲಿ ಏನು ವಸ್ತುಸ್ಥಿತಿ ಇದೆ ಎಂಬುದು ನಮಗೆ ಗೊತ್ತಿಲ್ಲ. ಯಾವುದು ಅತ್ಯಂತ ಆದ್ಯತೆ ಇದೆ, ಅದಕ್ಕೆ ಮೊದಲು ಕೊಟ್ಟು ಉಳಿದಿರತಕ್ಕಂಥಾದ್ದಕ್ಕೆ ಕರ್ತವ್ಯಗಳನ್ನು ನಿರ್ವಹಿಸಲೂ ಕೂಡ ಸರಕಾರ ಅವರಿಗೆ ಬೇಕಾದಂಥ ಸೂಕ್ತ ರಕ್ಷಣೆಯನ್ನು ಕೊಡುತ್ತದೆ. Law will take its due course- ಎಂಬುದನ್ನು ತಮ್ಮ ಮೂಲಕ ಹೇಳಬಯಸುತ್ತೇನೆ.

(ಐ) ಬಿಜಾಪುರ ಜಿಲ್ಲೆಯ ಇಳಕಲ್‌ನಲ್ಲಿ ರತಕ್ಕ ಜೆಮ್ಸ್ ಗ್ರಾನೈಟ್ ಸಂಸ್ಥೆ ಬಗ್ಗೆ

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ ಬಹಳ ಮುಖ್ಯವಾದಂಥ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಇದ್ದೇನೆ. 27-3-1997 ರಂದು ಈ ಸರಕಾರ ಬಿಜಾಪುರ ಜಿಲ್ಲೆಯ ಇಳಕಲ್‌ನಲ್ಲಿ ರತಕ್ಕಂಥ ಜೆಮ್ಸ್ ಗ್ರ್ಯಾನೈಟ್ ಸಂಸ್ಥೆಗೆ ಕ್ವಾರಿಯಿಂಗ್‌ಗಾಗಿ ಲೈಸನ್ಸ್ ಕೊಟಿದ್ದರು. ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಿದೆ ಮತ್ತು ನಾನು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಹಾಕಿದ್ದಾಗ ಹೈಕೋರ್ಟ್ ಅದನ್ನು ವಜಾ ಮಾಡಿತು. ಹೀಗೆ ಸರಕಾರದ ಆದೇಶವನ್ನು ವಜಾ ಮಾಡಿದ ಕಾರಣ ಮತ್ತೆ ಅವರು ಸುಪ್ರೀಂಕೋರ್ಟ್‌ಗೆ ಹೋಗಿದ್ದಾರೆ. ಅಲ್ಲಿಂದ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ನಾನು ತಮ್ಮಲ್ಲಿ ಪ್ರಸ್ತಾಪ ಮಾಡುವುದೇನೆಂದರೆ 27-3-99ಕ್ಕೆ ಇವರು ಎರಡು ವರ್ಷಗಳಿಗಾಗಿ ಲೀಸ್‌ನ್ನು ಏನು ಕೊಟ್ಟಿದ್ದಾರೆ, ಆ ಕ್ವಾರಿಯಿಂಗ್ ಅವಧಿಯು ಮುಗಿದಿದೆ. ಈಗ ಸರಕಾರದವರು ಹೊಸದಾಗಿ ಕ್ರಮ ತೆಗೆದುಕೊಂಡು ಯಾರಿಗೆ ಕೊಡಬೇಕು. ಯಾವ ರೀತಿಯಲ್ಲಿ ಕೊಡಬೇಕು ಮತ್ತು ಹೇಗೆ ಕೊಡಬೇಕನ್ನುವ ಬಗ್ಗೆ ಸರಕಾರದವರು ಸಕಾಲಿಕ ಕ್ರಮವನ್ನು ಜರುಗಿಸ ಬೇಕಾಗಿದೆ. ಒಂದು ವರ್ಷಕ್ಕೆ 300 ಕೋಟಿ ರೂ. ಗಳಷ್ಟು ಸರಕಾರಕ್ಕೆ ಬರತಕ್ಕಂಥ ಆದಾಯವನ್ನು ಕೇವಲ 10 ಕೋಟಿ ರೂ.ಗಳಿಗೆ ಕೊಟ್ಟಿದ್ದಾರೆ. ಹೀಗೆ ಕೊಟ್ಟಿರುವುದು ಸರಿಯಲ್ಲ ಎಂದು ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಾ ಇದೆ. ಈಗ ಅವರಿಗೆ ಕೊಟ್ಟಿರುವ ಅವಧಿಯು 27ನೇ ತಾರೀಖಿಗೆ ಮುಗಿದಿದ್ದು ನಾಲ್ಕು ದಿನಗಳು ಹೆಚ್ಚು ಆಗಿವೆ. ಹೀಗೆ ನಾಲ್ಕು ದಿನಗಳಾಗಿದ್ದರೂ ಆ ಬಗ್ಗೆ ಸರಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ? ಹೈಕೋರ್ಟ್‌ನವರು ಆಬ್ಸರ್ವ್ ಮಾಡಿದ ಪ್ರಕಾರ ಒಂದು ದಿನಕ್ಕೆ

ಸುಮಾರು ಒಂದೂವರೆ ಕೋಟಿ ರೂ. ಗಳಷ್ಟು ಗ್ರಾನೈಟ್ ವಿದೇಶಕ್ಕೆ ಹೋಗುತ್ತಿದೆ. ಈಗ ಆಗ್ರಿಮೆಂಟ್ ಅವಧಿ ಮುಗಿದು ನಾಲ್ಕು ದಿನಗಳು ಆಗಿವೆ. ಮುಂದಿನ ವ್ಯವಹಾರದ ಬಗ್ಗೆ ಏನು ಕ್ರಮಗಳನ್ನು ಸರಕಾರವು ತೆಗೆದುಕೊಂಡಿದೆ? ಎರಡನೆಯದಾಗಿ, ಪ್ರಮುಖವಾಗಿ ಹೈಕೋರ್ಟ್‌ನವರು ಅಬ್ಸರ್ವ್ ಮಾಡಿರತಕ್ಕಂಥಾದ್ದು ಏನೆಂದರೆ ಮೈಸೂರ್ ಮಿನರಲ್ ಕಾರ್ಪೋರೇಷನ್ನಿನ ರೂಲ್ 56ರಲ್ಲಿ ಸರಕಾರಕ್ಕೆ ದತ್ತವಾಗಿರತಕ್ಕಂಥ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನುವ ಅಬ್ಸರ್ವೇಶನ್ ಇದೆ. ಅದರ ಪ್ರಕಾರ ಟೆಂಡರ್ ಕಂ ಆಕ್ಷನ್ ಮಾಡಬೇಕೆಂಬುದು ಸ್ಪಷ್ಟವಾಗಿ ಇದೆ.

"By inviting offers through tender-cum-auction, the State would have definitely earned much more revenue in view of the competion. Why the 4th respondent alone has been chosen is a matter to be questioned"

This is the observation of the High Court.

ಅಂದರೆ ರೂಲ್ : 56ರ ಪ್ರಕಾರ, ಟೆಂಡರ್ ಕಂ ಆಕ್ಷನ್ ಹಾಗಬೇಕಾಗಿತ್ತು ಆ ಕ್ರಮವನ್ನು ಅನುಸರಿಸದೆ ಇದ್ದುದರಿಂದಲೇ ಇಷ್ಟೆಲ್ಲಾ ಸಮಸ್ಯೆಗಳು ಬಂದಿರತಕ್ಕಂಥಾದ್ದು. ಈಗೂ ನಾಲ್ಕು ದಿನಗಳಾಗಿದ್ದರೂ ಯಾವ ಕ್ರಮವನ್ನು ಸರಕಾರದವರು ತೆಗೆದುಕೊಂಡಿದ್ದಾರೆ ಹಾಗೂ ಮತ್ತೆ ಟೆಂಡರ್ ಕಂ ಆಕ್ಷನ್ ತೆಗೆದುಕೊಳ್ಳುತ್ತಾರೆಯೇ ಎಂಬ ಬಗ್ಗೆ ನಾನು ಒತ್ತಾಯಪೂರ್ವಕವಾಗಿ ಕೇಳಬಯಸುತ್ತೇನೆ. ಯಾರೋ ಒಬ್ಬರು ಅರ್ಜಿ ಕೊಟ್ಟರು ಅದರ ಪ್ರಕಾರ ಸರಕಾರಕ್ಕೆ 300ಕೋಟಿಗಳ ಆದಾಯ ಬರತಕ್ಕಂಥಾದ್ದನ್ನು 10ಕೋಟಿಗಳಿಗೆ ಕೊಟ್ಟು ಬಿಟ್ಟಿದ್ದಾರೆ. ಹೀಗೆ ಆಗಬಾರದು. ಹೀಗೆ ಸರಕಾರವು 300ಕೋಟಿ ರೂ. ಗಳಷ್ಟು ನಷ್ಟ ಮಾಡಿಕೊಂಡಿದೆ. ಟೆಂಡರ್ ಕಂ ಆಕ್ಷನ್ ಮಾಡಿದರೆ ಸರಕಾರಕ್ಕೆ ಹೆಚ್ಚು ಹಣ ಬರುತ್ತದೆ. ಸರಕಾರದ ಪಬ್ಲಿಸಿಟಿಗಳಿಗೆ ಅದನ್ನು ಕೊಟ್ಟರೆ ಸರಕಾರಕ್ಕೆ ಹೆಚ್ಚು ಆದಾಯ ಬರುತ್ತದೆ. ನಮ್ಮ ರಾಜ್ಯಕ್ಕೆ ಹೆಚ್ಚು ಆದಾಯ ಬರುತ್ತಿರುವುದು ಅಬಕಾರಿ ಮತ್ತು ಗ್ರಾನೈಟ್ ಕ್ಷೇತ್ರದಿಂದ. ಹೀಗೆ ಈ ಕ್ಷೇತ್ರಗಳಿಂದ ಸರಕಾರಕ್ಕೆ ಬರುತ್ತಿರುವ ಆದಾಯವನ್ನು ಸರಿಯಾಗಿ ಉಪಯೋಗಿಸಬೇಕಾದರೆ ಟೆಂಡರ್ ಕಂ ಆಕ್ಷನ್ ಮಾಡಬೇಕೆಂದು ಹೈಕೋರ್ಟ್‌ನ ಅಬ್ಸರ್ವೇಶನ್ ಇದೆ. ಕರ್ನಾಟಕ ಮೈಸೂರು ಮಿನರಲ್ ಆಕ್ಟ್‌ನಲ್ಲಿಯೇ ಅದು ಸೂಚಿತವಾಗಿದೆ. ಹಾಗೆಯೇ ನನ್ನ ಒತ್ತಾಯ ಕೂಡ ಅದೇ ಆಗಿದೆ. ಹಾಗಾಗಿ, ಸರಕಾರ ಈ ಕುರಿತು ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತದೆ? ಟೆಂಡರ್ ಕಂ ಆಕ್ಷನ್ ಮಾಡುವುದನ್ನು ಸರಕಾರ ಮಾಡುತ್ತದೆಯೇ ? ಎಂಬುದನ್ನು ತಮ್ಮ ಮುಖಾಂತರ ಸರಕಾರವನ್ನು ಕೇಳಬಯಸುತ್ತೇನೆ.

ಶ್ರೀ ಎ.ಬಿ. ಪಾಟೀಲ್ (ಭೂವಿಜ್ಞಾನ ಖಾತೆ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಬಳಕುಂದಿ ಗ್ರಾಮದ ಜೆಮ್ ಗ್ರಾನೈಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸರಕಾರ ಅವರಿಗೆ ಎರಡು ವರ್ಷಗಳ ಅವಧಿಗೆ ಗಣಿಗಾರಿಕೆ ಮಾಡಲು ಅವಕಾಶ ಕೊಟ್ಟಿತ್ತು. 27-3-99ಕ್ಕೆ ಅದು ಮುಗಿದಿದೆ ಎಂದು ಹೇಳಿದ್ದಾರೆ. ಯಾವುದೇ ಲೀಸ್ ಕೊಟ್ಟರೂ ಅವಧಿ ಮುಗಿದ ಕೂಡಲೇ ಅದನ್ನು ನಿಲ್ಲಿಸಿ ಮುಂದೆ ಯಾರಿಗೆ ಕೊಡಬೇಕೆಂಬ ಬಗ್ಗೆ ಸೂಕ್ತ ನಿಯಮಾನುಸಾರ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಅವರು ರೂಲ್ :56 ರ ಕುರಿತು ಹೇಳಿದ್ದಾರೆ. ಅದು ಎಲ್ಲಿ ಅನ್ವಯವಾಗುತ್ತದೆ? ಅದು ಖಾಸಗಿ ಜಮೀನುಗಳಿಗೆ ಅನ್ವಯವಾಗುವುದಿಲ್ಲ. ಅದು ಸರಕಾರಿ ಜಮೀನುಗಳಿಗೆ ಮಾತ್ರ

ಅನ್ವಯವಾಗುತ್ತದೆ. ಯಾವುದೇ ಪಟ್ಟಾ ಲ್ಯಾಂಡ್‌ನ್ನು ನಾವು ಆಕ್ಷನ್ ಮಾಡಬೇಕಾದರೆ, ಯಾವ ಮಾಲೀಕರೂ ಕೂಡ ಒಪ್ಪುವುದಿಲ್ಲ. ತಾವುಗಳು ಈ ಕುರಿತು ತಪ್ಪು ಮಾಹಿತಿಗಳನ್ನು ಕೊಡಬೇಡಿ. ಹೈಕೋರ್ಟ್‌ನವರು ಅಬ್‌ಸರ್ವೇಷನ್ ಇರುವುದು ನಿಜ. ಅದನ್ನು ಆಕ್ಷನ್ ಮಾಡಬಹುದು ಅಥವಾ ಲೀಸ್‌ಗೂ ಕೊಡಬಹುದು. ಈ ಜಮೀನು ಸರಕಾರದ್ದಲ್ಲ. ಈ ಜಮೀನಿನ ಬಗ್ಗೆ ಡಿಸ್ಪ್ಯೂಟ್ ಬಾಗಲಕೋಟೆಯ ಸಿವಿಲ್‌ಕೋರ್ಟ್‌ನಲ್ಲಿದೆ. ಆದ್ದರಿಂದ ದಯಮಾಡಿ ಈ ವಿಚಾರಗಳನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ ನಾನು ಸದನವನ್ನು ತಪ್ಪುದಾರಿಗೆ ಎಳೆಯುತ್ತಾ ಇಲ್ಲ. ಈ ಸರಕಾರಕ್ಕೆ ಬಿಜಾಪುರ ಜಿಲ್ಲಾ ಡಿ.ಸಿ. ಯವರು ಅಲ್ಲಿನ 220 ಎಕರೆ ಜಮೀನು ಸರಕಾರದ್ದು ಎಂದು ಆರ್ಡರ್ ಮಾಡಿದ್ದ ಬಗ್ಗೆ ಕನಿಷ್ಟ ಪ್ರಜ್ಞೆ ಇಲ್ಲ. ಅದರ ಬಗ್ಗೆ ಮಾನ್ಯ ಸಚಿವರು ಏನೂ ಹೇಳುತ್ತಿಲ್ಲ. ಕೋರ್ಟ್‌ನಲ್ಲಿ ಡಿಸ್ಪ್ಯೂಟ್ ಇರತಕ್ಕಂಥಾದ್ದು ನನಗೆ ಗೊತ್ತಿದೆ. ಕ್ವಾರಿ ಬಗ್ಗೆ ಹೈಕೋರ್ಟ್‌ನಲ್ಲಿ ಗವರ್ನ್‌ಮೆಂಟ್ ಆರ್ಡರ್‌ನ್ನು ಕ್ವಾಷ್ ಮಾಡಿರುವುದನ್ನು ಪುನಃ ಸುಪ್ರೀಂಕೋರ್ಟ್‌ನಲ್ಲಿ ಸ್ಟೇ ತೆಗೆದುಕೊಂಡಿರುವುದೂ ಕೂಡ ನನಗೆ ಗೊತ್ತಿದೆ.

ಶ್ರೀ ಎ. ಬಿ. ಪಾಟೀಲ್ : ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್‌ನವರು ಸರಿಯಾದ ಸ್ಪಷ್ಟವಾದ ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ. ಅವರು ಇದನ್ನು ನಿರ್ಧರಿಸುವ ಹಕ್ಕು ಸಿವಿಲ್ ಕೋರ್ಟ್‌ಗೆ ಇದೆ ಎಂದು ಅಬ್ಸರ್ವೇಷನ್‌ನಲ್ಲಿ ಹೇಳಿದ್ದಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಈ ನೋಟಿಫಿಕೇಷನ್‌ನ ಬಗ್ಗೆ ಸರಕಾರದ ಆದೇಶದ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿರತಕ್ಕಂಥಾದ್ದು. ಅಲ್ಲಿರುವುದು ಜಮೀನಿನ ವಿವಾದ ಅಲ್ಲ. ಜಮೀನು ಯಾರಿಗೆ ಸೇರಿದೆ ಎನ್ನುವುದರ ಬಗ್ಗೆ ಪ್ರಕರಣವು ಬಾಗಲಕೋಟೆಯ ಸಿವಿಲ್‌ಕೋರ್ಟ್‌ನಲ್ಲಿದೆ. ಅದು ನಡೆಯುತ್ತಾ ಇದೆ. ಅದು ನನಗೂ ಗೊತ್ತಿದೆ. ಬಿಜಾಪುರ ಡಿಸಿ ಯವರು ಆರ್ಡರ್ ಮಾಡಿರತಕ್ಕಂಥಾದ್ದು ಏನು? ಲ್ಯಾಂಡ್ ರೆವಿನ್ಯೂ ಆ್ಯಕ್ಟ್ 567 ರ ಪ್ರಕಾರ, ಇದು ಸರಕಾರಿ ಜಮೀನು ಎಂದು ಡಿಸಿಶನ್ ಆದಮೇಲೆ ಅವರು ಹೈಕೋರ್ಟ್‌ಗೆ ಬಂದರು. ಹೈಕೋರ್ಟ್ ಸ್ಪಷ್ಟವಾಗಿ ಹೇಳಿತು. We need not interfere with the order of the D.C. Bjiapur ಎಂದು ಹೇಳಿತು. ಅಲ್ಲಿಂದ ಪ್ರಕರಣ ಸುಪ್ರೀಂಕೋರ್ಟ್‌ಗೆ ಹೋಯಿತು. It has upheld the judgment of the High court. The Supreme Court observed, you are free to approach any court., ಎಂದು ಹೇಳಿತು. ಆ ಆಧಾರದ ಮೇಲೆ ಬಾಗಲಕೋಟೆ ಸಿವಿಲ್ ಕೋರ್ಟ್‌ನಲ್ಲಿ ಪ್ರಾಪರ್ಟಿ ಬಗ್ಗೆ ಕೇಸ್ ಇರತಕ್ಕಂಥಾದ್ದು ನಿಜ. ಅಂದರೆ ಅದು ತತ್‌ಕ್ಷಣ ನಮ್ಮ ಪ್ರಾಪರ್ಟಿ ಎಂದು ಅಲ್ಲ. ಕೋರ್ಟ್‌ನವರು ಅದನ್ನು ಖಾಸಗಿ ಅಥವಾ ಸರಕಾರಿ ಜಮೀನು ಎಂಬ ಬಗ್ಗೆ ಇನ್ನೂ ತೀರ್ಮಾನವನ್ನು ಮಾಡಿಲ್ಲ. ಆದ್ದರಿಂದ ಕೋರ್ಟ್ ಅದು ಸರಕಾರದ್ದು ಅಲ್ಲ ಖಾಸಗಿ ಜಮೀನು ಎಂದು ಹೇಳುವವರೆಗೂ ಅದು ಸರಕಾರದ ಜಮೀನು ಎಂದು ಪರಿಗಣಿತವಾಗುತ್ತದೆ. ಯಾಕೆಂದರೆ ಬಿಜಾಪುರ ಜಿಲ್ಲಾಧಿಕಾರಿಯವರು ಮಾಡಿರತಕ್ಕಂಥ ಆಜ್ಞೆಯನ್ನು ಯಾವುದೇ ಕೋರ್ಟ್ ತಳ್ಳಿ ಹಾಕಿಲ್ಲ ಅಥವಾ ರದ್ದು ಮಾಡಿಲ್ಲ. ಅಲ್ಲಿ ಕೇಸ್ ನಡೆಯುತ್ತಾ ಇದೆ. ಒರಿಜನಲ್ ಸೂಟ್ ನಡೆಯುತ್ತಾ ಇದೆ. ಆ ಒರಿಜನಲ್ ಸೂಟ್ ನಡೆಯುತ್ತಿರತಕ್ಕಂಥ

ಬಾಗಲಕೋಟೆ ಸಿವಿಲ್‌ಕೋರ್ಟ್ ಕೂಡ, ಡಿಸಿ ಕೊಟ್ಟಿರತಕ್ಕಂಥ ಆರ್ಡರ್‌ನ್ನಾಗಲೀ, ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಕೊಟ್ಟಂಥ ಆರ್ಡರನ್ನು ತಡೆಯಾಜ್ಞೆ ನೀಡಿಲ್ಲ. It doesn't mean that the court has declared who is the owner of the property.- ಅದು ಖಾಸಗಿ ಜಮೀನು ಎಂದು ಡಿಕ್ಲೇರ್ ಮಾಡಿಲ್ಲ. ಎಲ್ಲಿಯವರೆಗೆ ಕೋರ್ಟ್ ಡಿಕ್ಲೇರ್ ಮಾಡುವುದಿಲ್ಲವೋ ಅಲ್ಲಿಯವರೆಗೆ ಅದು ಸರಕಾರದ್ದೇ ಜಾಗವಾಗಿರುತ್ತದೆ. ಬೇರೆಯವರ ಜಾಗವಾಗುವುದಿಲ್ಲ...

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ - ಇವರು ಆರ್ಡರ್ ಮಾಡಿದ್ದುದು ನಿಜ. ಅದರಲ್ಲಿ ಸರಕಾರದ ಜಮೀನು ಎಂದು ಹೇಳಿದ್ದಾರೆ. ಹೈಕೋರ್ಟ್‌ನಲ್ಲಿ ಇದು ಯಾರು ಜಮೀನು ಎಂದು ಗುರುತಿಸುವ ಕರ್ತವ್ಯ ಸಿವಿಲ್ ಕೋರ್ಟ್‌ನವರದ್ದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಸ್ಟೇ ತಂದಿದ್ದಾರೆ. ಮಾಲೀಕರು ಯಾರು ಎಂಬ ಬಗ್ಗೆ ಇನ್ನೂ ನಿರ್ಧಾರವಾಗಬೇಕಾಗಿದೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಸುಪ್ರೀಂಕೋರ್ಟ್‌ನವರು ಡಿಸಿ ಯವರ ಆರ್ಡರ್‌ನ್ನು ಸ್ಟೇ ಮಾಡಿಲ್ಲ. Even the Civil Court has passed a stay order against the Deputy commissioner's order. That does not mean that the property is declared as a private property.

ಹಾಗಾಗಿ ರೂಲ್ 56 ಇಲ್ಲಿ ಅಪ್ಲೈ ಆಗುತ್ತದೆ. ರೂಲ್ 56 ಏನು ಹೇಳುತ್ತದೆ: ಟೆಂಡರ್ ಕಂ ಆಕ್ಷನ್ ಎಂದು ಹೇಳುತ್ತದೆ. ಆ ಪ್ರಕಾರ ನೀವು ಆಕ್ಟ್ ಮಾಡಬೇಕಾಗುತ್ತದೆ. because the Court has not taken any action.

ಶ್ರೀ ಎಂ. ಪಿ. ಪ್ರಕಾಶ್ : ಅಧ್ಯಕ್ಷರೇ ಇದು ಶೂನ್ಯವೇಳೆ. ಸರ್ಕಾರದ ಗಮನವನ್ನು ಮಾನ್ಯ ಸದಸ್ಯರು ಸೆಳೆದಿದ್ದಾರೆ. ಸರ್ಕಾರದಿಂದ ಸರಿಯಾದ ಉತ್ತರವನ್ನು ನಾವು ಕೊಟ್ಟಿದ್ದೇವೆ. With regard to the dispute to the title or otherwise, the matter is pending before the Civil Judge's Court at Bangalkote. When such an answer has been given, can it be permitted to go on like this? It has a very limited scope.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಇದರ ಬಗ್ಗೆ ಅವರೇ ಪ್ರಸ್ತಾಪ ಮಾಡಿದ್ದು. ನಾನು ಎರಡು ಪ್ರಶ್ನೆ ಕೇಳಿದ್ದೇನೆ: ನಿಮ್ಮ ಅಗ್ರಿಮೆಂಟ್ ಟೈಂ ಮುಗಿದು ನಾಲ್ಕು ದಿವಸವಾಗಿದೆ. ಆ ನಾಲ್ಕು ದಿವಸದಲ್ಲಿ ಏನು ಮಾಡಿದ್ದೀರಿ? ಈಗ ಟೆಂಡರ್ ಕಂ ಆಕ್ಷನ್ ಮಾಡುತ್ತೀರೋ ಬೇರೆ ಏನು ಮಾಡುತ್ತೀರೋ? ಸಿವಿಲ್ ಡಿಸ್‌ಪ್ಯೂಟ್‌ಗೆ ನಾನು ಹೋಗಲೇ ಇಲ್ಲ.

ಶ್ರೀ ಎ. ಬಿ. ಪಾಟೀಲ್ : ಯಾವುದೇ ಸಿವಿಲ್ ಕೋರ್ಟಿನಲ್ಲಿ ಜಿಲ್ಲಾಧಿಕಾರಿಗಳ ಆದೇಶಕ್ಕೆ ಸ್ಟೇ ಕೊಟ್ಟರೆ ಆಗ ಅದು ಸ್ಟೇಟಸ್ ಕೋ ಆಗಿಯೇ ಉಳಿಯಿತಲ್ಲಾ. ಇಲ್ಲಿ ಜಿಲ್ಲಾಧಿಕಾರಿಗಳ ಆದೇಶಕ್ಕೆ ಸ್ಟೇ ಕೊಟ್ಟು ವರ್ಕಿಂಗ್ ಪರ್ಮಿಷನ್ನೂ ಕೊಟ್ಟಿದ್ದಾರೆ ಬಾಗಲಕೋಟೆ ಸಿವಿಲ್ ಕೋರ್ಟ್ 10 ಪರ್ಸೆಂಟ್ ಗ್ಯಾರಂಟಿ ಮೇಲೆ.

ಶ್ರೀ ಡಿ. ಕೆ. ಶಿವಕುಮಾರ್ : ಪಾಯಿಂಟ್ ಆಫ್ ಆರ್ಡರ್

ಉಪಾಧ್ಯಕ್ಷರು : ಇದಕ್ಕೆ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲವಲ್ಲಾ.

ಶ್ರೀ ಡಿ.ಕೆ. ಶಿವಕುಮಾರ್ : ಮತ್ತೆ ಇನ್ನೆಷ್ಟು ಮಾತನಾಡಲು ಅವಕಾಶ ಕೊಡುತ್ತೀರಿ? ಈ ಡಿಬೇಟ್ ಅನ್ನು 69 ರಲ್ಲಿ ತೆಗೆದುಕೊಂಡಿದ್ದೀರ ಅಥವಾ ಡಿಮಾಂಡ್ಸ್ ಮೇಲೆ ತೆಗೆದುಕೊಂಡಿದೀರಾ? ನನಗೂ ಈ ಸಬ್ಜೆಕ್ಟ್ ಮೇಲೆ ಮಾತನಾಡಲು ಬಿಡಿ. ಮೂರು ಗಂಟೆಯೇನು ಮೂರು ದಿನ ಬೇಕಾದರು ಮಾತನಾಡುತ್ತೇನೆ. ರೂಲ್ 56 ಅಂದರೇನು ಗೊತ್ತಿಲ್ಲ. ಪಟ್ಟಾ ಅಂದರೆ ಗೊತ್ತಿಲ್ಲ. ನಮ್ಮನ್ನು ಕೂರಿಸಿಕೊಂಡು ಎಷ್ಟು ಅವಕಾಶ ಕೊಡುತ್ತೀರಿ ಅಧ್ಯಕ್ಷರೇ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಪಟ್ಟಾ ಅಂದರೇನು ಎಂಬುದು ಎಲ್ಲಾ ಗೊತ್ತಿದೆ. ನಾನು ಕೇಳುತ್ತಿರುವುದು ಇಷ್ಟೆ : 56 ರೂಲ್ ಪ್ರಕಾರ ಏನು ?

(ಒ) ಚಿಕ್ಕನಾಯಕನಹಳ್ಳಿಯಲ್ಲಿ ಫೋರ್ಜರಿ ಸಾಗುವಳಿ ಚೀಟಿ ತೆಗೆದುಕೊಂಡು ಖಾತೆ ಪಹಣಿ ಮಾಡಿಸಿ ಕೊಂಡಿರುವುದು.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಅಧ್ಯಕ್ಷರೇ ಚಿಕ್ಕನಾಯಕನಹಳ್ಳಿಯಲ್ಲಿ ಫೋರ್ಜರಿ ಸಾಗುವಳಿ ಚೀಟಿ ತೆಗೆದುಕೊಂಡು ಖಾತೆ ಪಹಣಿ ಮಾಡಿಸಿಕೊಂಡು ಜಮೀನುಗಳಲ್ಲಿರುವ ಬೇರೆಯವರನ್ನು ವಕ್ಕಲೆಬ್ಬಿಸಿ ಈಗಾಗಲೇ ಸೆಪರೇಟಾಗಿ ಒಂದು ಮ್ಯುಟೇಷನ್ ರಿಜಿಸ್ಟರ್ ಮೇಂಟೆನ್ ಮಾಡಿ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡು ಇಡೀ ಸರ್ಕಾರ ವ್ಯವಸ್ಥೆಯೇ ಅಸ್ತವ್ಯಸ್ತವಾಗಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಇದನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬಯಸುತ್ತಾ. ಅಲ್ಲಿ ಇವತ್ತು ಸುಮಾರು 110 ಸಾಗುವಳಿ ಚೀಟಿಯನ್ನು ಫೋರ್ಜರಿ ಮಾಡಿ ಯಾರೋ ರಿಟೈರಾದ ತಹಸೀಲ್ದಾರ್ ಹೆಸರನ್ನು ಬೇರೆಯವರು ಸೈನ್ ಹಾಕಿ ಖಾತೆ ಪಹಣಿ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ಆ ಬಗ್ಗೆ ಮತ್ತು ಅಲ್ಲಿ ಎರಡು ಮ್ಯುಟೇಷನ್ ರಿಜಿಸ್ಟರ್‌ಗಳನ್ನು ಮೇಂಟೆನ್ ಮಾಡಿದ್ದಾರೆ ಎಂದು ಹೇಳುತ್ತಾರೆ. ಒಂದು ತಾಲ್ಲೂಕಿಗೆ ಒಂದು ರಿಜಿಸ್ಟರ್ ಇರುವುದು ಕಾನೂನು ಗೊತ್ತಿರುವವರ ಮತ್ತು ನಮ್ಮಗಳ ಅಭಿಪ್ರಾಯ. ಎರಡು ರಿಜಿಸ್ಟರ್ ಇಟ್ಟುಕೊಂಡು ನೀವು ಇದಕ್ಕೆ ಸಾಲ ಕೊಡಬೇಡಿರಿ ಅಂದರೂ ಖಾತೆ ಪಹಣಿ ಮಾಡಿಕೊಟ್ಟಿರುವವರ ಬಗ್ಗೆ ಸರ್ಕಾರ ಗಮನಹರಿಸಿ ಆ ಬಗ್ಗೆ ಒಂದು ಸಿಓಡಿ ತನಿಖೆಯನ್ನು ಯಾಕೆಂದರೆ 1984 ರಲ್ಲಿ ರಿಟೈರಾದ ಒಬ್ಬ ಅಧಿಕಾರಿ ಹೆಸರನ್ನು ಫೋರ್ಜರಿ ಮಾಡಿ ಅವತ್ತೇ ಪಡೆದಿದ್ದು ಎಂದು ಹೇಳಿರುವುದರಿಂದ ವ್ಯಾಪಕವಾದ ಜಾಲವೊಂದು ಇದರ ಹಿಂದೆ ಇರುವುದರಿಂದ ಇದರ ಪೂರ್ಣ ತನಿಖೆಗೆ ಒಂದು ಸಿಓಡಿ ತನಿಖೆಗೆ ನಿಯಮಿಸುತ್ತೀರಾ? ಸತ್ಯಾಂಶವನ್ನು ಆಚೆಗೆ ತಂದು ಯಾರು ವಾಸ್ತವವಾಗಿ ಜಮೀನನ್ನು ಉಳುಮೆ ಮಾಡುತ್ತಿದ್ದರೋ ಅವರಿಗೆ ರಕ್ಷಣೆ ಕೊಡುತ್ತೀರಾ ಎಂದು ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಅಧ್ಯಕ್ಷರೇ, ಈ ಮುಂಚೆ ಕೂಡ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಯಾರೋ ನಿವೃತ್ತ ತಹಸೀಲ್ದಾರ್‌ರ ಹೆಸರಿನಲ್ಲಿ ಫೋರ್ಜರಿ ಮಾಡಿ ಮಾಡಿರುವುದು ಬಹಳ ಗುರುತರವಾದ ಆಪಾದನೆ. He is liable for criminal prosecution. ಆದ್ದರಿಂದ ಮಾನ್ಯ ಸಚಿವರು ಬಂದ ತಕ್ಷಣವೇ ಈ ವಿಷಯವನ್ನು ಅವರ ಗಮನಕ್ಕೆ ತಂದು ಅವರ ಮೇಲೆ ತನಿಖೆ ಮಾಡುವುದು ಮತ್ತು ತಪ್ಪಿತಸ್ಥರ ಮೇಲೆ ಕ್ರಿಮಿನಲ್ ಮೊಕದ್ದಮೆ ಕೂಡ ಹಾಕತಕ್ಕದ್ದು ಮಾಡುತ್ತಾ.